# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಪ್ರಾಸಾ-16 ಚಾಸಾ-59)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 16.07.2022

| | | |
|---|---|---|
| ಸಾಕ್ಷಿದಾರರ ಹೆಸರು | - | ನವೀನ್ ಕುಮಾರ್, |
| ತಂದೆಯ ಹೆಸರು | - | ರತ್ನಮ್ಮಯ್ಯ, |
| ವಯಸ್ಸು | - | 42 ವರ್ಷ, |
| ಉದ್ಯೋಗ | - | ತೋಟದ ಕೆಲಸ, |
| ವಾಸ | - | ಟಿ. ಕ್ರಾಸ್, ದೊಡ್ಡಬಳ್ಳಾಪುರ. |

## ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ

1. ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿ ಆನಂದಗೌಡ ಇವರ ಪರಿಚಯ ಇಲ್ಲ. ಚಾಸಾ-60 ಮತ್ತು 61 ಇವರ ಪರಿಚಯ ಇಲ್ಲ. ಈಗ ತೋರಿಸಲಾದ ದಾಖಲೆ ಮೇಲೆ ನನ್ನ ಸಹಿ ಇದೆ. ಸಾಕ್ಷಿಗೆ ತೋರಿಸಿದ ದಾಖಲೆ ದಿಃ11.04.2010 ರಂದು ಮಾಡಿದ ಪಂಚನಾಮೆ ಇದ್ದು ಅದನ್ನು ನಿಪಿ-18 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-18(ಎ) ಎಂದು ಗುರ್ತಿಸಲಾಯಿತು. ಸದರಿ ದಾಖಲೆಗೆ ಈಗ ಸುಮಾರು ಹತ್ತು ವರ್ಷಗಳ ಹಿಂದೆ ದೊಡ್ಡಬಳ್ಳಾಪುರ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. 3 ನೇ ಆರೋಪಿಯಾಗಲೀ, ಪೋಲಿಸರಾಗಲೀ ನನ್ನನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ. ನನ್ನ ಸಮಕ್ಷಮ ಯಾವುದೇ ದ್ವಿಚಕ್ರ ವಾಹನವನ್ನು 3 ನೇ ಆರೋಪಿ ಪೋಲಿಸರಿಗೆ ತೋರಿಸಿಲ್ಲ ಮತ್ತು ಪೋಲಿಸರು ನನ್ನ ಸಮಕ್ಷಮ ಅದನ್ನು ಅಮಾನತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಸ್ ಪಿ ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದರಿಂದ ಅನುಮತಿ ನೀಡಲಾಯಿತು.)

## ಪಾಟೀ ಸವಾಲು ಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ

2. ದಿಃ10.04.2010 ರಂದು ಮಧ್ಯಾಹ್ನ 01.15 ಘಂಟೆಗೆ ದೊಡ್ಡಬಳ್ಳಾಪುರದ

ಡಿವೈಎಸ್ಪಿರವರು ನನ್ನನ್ನು ಹಾಗೂ ಚಾಸಾ-60 ಮತ್ತು 61 ಇವರನ್ನು ತಮ್ಮ ಕಛೇರಿಗೆ ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ 3ನೇ ಆರೋಪಿ ಇದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ತಿಂಡ್ಲು ಗ್ರಾಮದ ಕೆರೆಯ ಹತ್ತಿರ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಅಲ್ಲಿ ಕೆರೆಯಲ್ಲಿ ಹುಡುಕಾಡಿದಾಗ ಯಾವುದೇ ಚಾಕು ಸಿಗಲಿಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿ ಸದರಿ ಸ್ಥಳವನ್ನು ತೋರಿಸಿದ್ದರಿಂದ ಪೋಲಿಸರು ಅಲ್ಲಿ ನಿಪಿ-18ರಂತೆ ಮಹಜರ್ ಅನ್ನು ಮಧ್ಯಾಹ್ನ 02.00ರಿಂದ 03.00 ಘಂಟೆ ಅವಧಿಯಲ್ಲಿ ಮಾಡಿ ಅಲ್ಲೇ ನಮ್ಮ ಸಹಿಯನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ.

3. ಸದರಿ ಆರೋಪಿ ನಮ್ಮನ್ನು ತಿಂಡ್ಲು ಗ್ರಾಮದ ಕೆರೆಯ ಹತ್ತಿರ ಕರೆದುಕೊಂಡು ಹೋಗುವ ಮೊದಲು ದೊಡ್ಡಬಳ್ಳಾಪುರ ಪೋಲಿಸ್ ಠಾಣೆಯ ಮುಂಭಾಗ ಸದರಿ 3ನೇ ಆರೋಪಿ ಬಜಾಜ್ ಕಂಪನಿಯ ಹಸಿರು ಬಣ್ಣದ ಕೆಎ-04-ಇಹೆಚ್-3483 ವಾಹನವನ್ನು ಹಾಜರುಪಡಿಸಿದ ಮತ್ತು ಪೋಲಿಸರು ಅದನ್ನು ಒಂದು ಮಹಜರ್ ಮಾಡಿ ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಮಹಜರ್ ಅನ್ನು ಮಧ್ಯಾಹ್ನ 12.00ರಿಂದ 12.45 ಘಂಟೆ ಅವಧಿಯಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ.

(ಸದರಿ ಮಹಜರ್ ದಾಖಲೆಗಳಲ್ಲಿ ಕಂಡುಬರುತ್ತಿಲ್ಲ. ಆದ್ದರಿಂದ ಸಾಕ್ಷಿದಾರರ ಮುಂದುವರಿದ ವಿಚಾರಣೆಗೆ ಮಾನ್ಯ ಎಸ್ ಪಿ ಪಿ ರವರುವ ಸಮಯ ಕೋರುತ್ತಾರೆ. ಈ ಸಾಕ್ಷಿಯು ಪ್ರತಿಕೂಲ ಸಾಕ್ಷಿ ಇರುತ್ತಾರೆ. ಆದ್ದರಿಂದ ಸದರಿ ಮಹಜರ್ ಅನ್ನು ತನಿಖಾಧಿಕಾರಿಯವರ ಮೂಲಕ ಸಾಬೀತುಪಡಿಸಲು ಅನುಮತಿ ನೀಡಲಾಗಿದೆ. ಸಾಕ್ಷಿಯ ಈವರೆಗಿನ ಹೇಳಿಕೆಯನ್ನು ಪರಿಗಣಿಸಿದಾಗ ಅವರ ಸಹಿಯನ್ನು ಸದರಿ ಮಹಜರ್ ಮೇಲೆ ಗುರ್ತಿಸುವ ಉದ್ದೇಶಕ್ಕಾಗಿಯೇ ವಿಚಾರಣೆಯನ್ನು ಮುಂದೂಡುವುದು ಉಚಿತವಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟು ಮಾನ್ಯ ಎಸ್ ಪಿ ಪಿ ರವರ ಮನವಿಯನ್ನು ನಿರಾಕರಿಸಲಾಗಿದೆ.)

ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಎಲ್ಲಾ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸಿದ್ದೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು